ಆಗಲೂ ಸಿಕ್ಕಿದ್ದಿದ್ದರೆ ಎಷ್ಟೋ ಸಹಾಯವಾಗುತ್ತಿತ್ತಲ್ಲವೇ ಎಂದು ಅನಿಸುತ್ತಿತ್ತು. ಇದಕ್ಕೂ ಕಾರಣವಿದೆ. ಊಟ ತಿಂಡಿ ವಿಷಯದಲ್ಲಿ ನಾವೆಷ್ಟೇ ಉದಾರಿಗಳಾಗಿದ್ದರೂ ಸಂಬಳ ಬಟವಾಡೆಯಾಗುವುದು ಮಾತ್ರ ಏಜೆನ್ಸಿಗಳ ಮೂಲಕವೇ! ಪೇಶಂಟ್‌ಗಳ ಕಂಡೀಶನ್ ಮೇಲೆ ಹಣ ನಿಗದಿ ಮಾಡುವ ಏಜೆನ್ಸಿಯವರು ತಮ್ಮ ಕಚೇರಿಯ ಖರ್ಚುವೆಚ್ಚಗಳಿಗಾಗಿ ನಾಲ್ಕನೇ ಅಥವಾ ಮೂರನೇ ಒಂದು ಭಾಗ ಹಣ ಮುರಿದುಕೊಳ್ಳುವುದಲ್ಲದೇ ಕೆಲವೊಮ್ಮೆ ಎಕೌಂಟಿಗೆ ಸಂಬಳ ಹಾಕುವುದನ್ನೂ ಮುಂದೂಡಿದಾಗ ನಾನಾ ತಾಪತ್ರಯಗಳಿಂದಾಗಿ ಫೈನಾನ್ಸ್‌ಗಳಲ್ಲಿ ಬಡ್ಡಿಗೆ ಸಾಲ ತಂದಿದ್ದ ಈ ಆಯಾಗಳು ಅವಧಿಯೊಳಗೆ ಹಣ ಕಟ್ಟಲಾಗದೇ ಅಳು, ಕೋಪ ತಾಪಗಳಿಂದ ಮಂಕಾದಾಗಲೆಲ್ಲ ನನ್ನವರ ಪಿತ್ತ ನೆತ್ತಿಗೇರಿ ಸಂತ್ರಸ್ತೆಯರ ಪರ ವಶೀಲಿಬಾಜಿ ಮಾಡುತ್ತಾ ‘ಏನ್ರೀ? ನಾವು ಮಾತ್ರ ನಿಮಗೆ ಅಡ್ವಾನ್ಸ್ ಆಗಿ ಪೇ ಮಾಡ್ಬೇಕು; ಬಟ್, ನೀವು ತಿಂಗಳು ಮುಗಿದು ಎರಡು ವಾರ ಆದ್ರೂ ಅವರಿಗೆ ಸ್ಯಾಲರಿ ಕೊಡಲು ಸತಾಯಿಸ್ತೀರಿ! ತಿಂಗಳೆಲ್ಲ ಅವ್ರ ಕೈಲಿ ಸೇವೆ ಮಾಡಿಸ್ಕೊಂಡ ನಮಗೆ ಗಿಲ್ಟ್ ಕಾಡ್ಲಿ ಅಂತಾನಾ?’



ಹೀಗೆಲ್ಲ ‘ಕಂಗ್ಲಿಷ್’ನಲ್ಲಿ ಕ್ಲಾಸ್ ತಗೊಳ್ಳುವುದರ ಜೊತೆಗೆ ಈ ಏಜೆನ್ಸಿ ಸಹವಾಸಾನೇ ಬೇಡ, ನೇರ ನೇಮಕ ಮಾಡ್ಕೊಂಡ್ರೆ ನರ್ಸ್‌ಗಳಿಗೆ ಜಾಸ್ತಿ ದುಡ್ಡೂ ಸಿಗತ್ತಲ್ಲ ಅನ್ನುವ ದೂರಾಲೋಚನೆ ಹೊಳೆದರೂ ಅದರ ದೂರಗಾಮಿ ಪರಿಣಾಮಕ್ಕೆ ಹೆದರಿ ಅಂದರೆ ಅನಿವಾರ್ಯವಾಗಿ ನರ್ಸ್ ರಜಾ ಹಾಕಿದರೆ ಸಕಾಲದಲ್ಲಿ ಬದಲಿ ರಿಲೀವರ್ ಸಿಗದೇ ಅತ್ತೆಮ್ಮನವರ ‘ಸಕಲ ಸೇವೆ’ಯೆಲ್ಲ ನಮ್ಮ ಪಾಲಿಗೆ ವರ್ಗಾವಣೆಯಾಗುವ ವಿಷಯ ನೆನೆಸಿಕೊಂಡು ಆ ಯೋಜನೆ ಕೈ ಬಿಟ್ಟಿದ್ದೆವು. ಅದರಲ್ಲೂ- ಭೂತಕಾಲದಲ್ಲಿ ನಮ್ಮಿಬ್ಬರು ಮಕ್ಕಳಿಗೆ, ನಡುವಯಸ್ಸಲ್ಲಿ ಮೊಮ್ಮಕ್ಕಳಿಗೆ ಮಾಡಿದ ನರ್ಸಿಂಗ್ ಬಿಟ್ಟರೆ ನನ್ನ ಈ ಇಳಿ ವಯಸ್ಸಿನಲ್ಲಿ ದಿನಚರಿಯ ಉಳಿದ ಗೃಹಕೃತ್ಯಗಳ ಜೊತೆ ಅತ್ತೆಯ ‘ಸೇವೆ’ ಮಾಡುವುದೆಂದರೆ ತಲೆ ತಿರುಗಿದಂತಾಗುತ್ತಿತ್ತು! ಆ ಕೈಂಕರ್ಯಕ್ಕೆ ಶ್ರವಣಕುಮಾರನಂಥಾ ಅವರ ಮಗ ರೆಡಿಯಿದ್ದರೂ ನಮ್ಮತ್ತೆಯ ಹೆಣ್ಣುಮನ ಅದಕ್ಕೊಪ್ಪುತ್ತಿರಲಿಲ್ಲ. ಹೀಗಾಗಿಯೇ ಮೂರು ವರ್ಷಗಳ ಅವಧಿಯಲ್ಲಿ ಏಜೆನ್ಸಿಯವರ ಮೂಲಕವೇ ಒಟ್ಟು ಹದಿನೇಳು ಆಯಾಗಳು ನಮ್ಮ ಮನೆ ಮಕ್ಕಳಂತೆ ಇದ್ದುದಲ್ಲದೆ ನಮಗೆ ‘ದೇಸಿದರ್ಶನ’ ಮಾಡಿಸಿದ ಅರ್ಚಕಿಯರೂ ಆಗಿದ್ದರು!

ಅಂದಹಾಗೆ ಈ ನಡುವೆ ಗೋಚರಿಸಿದ ‘ಕಂಗ್ಲಿಷ್’ ಕೂಡ ನಮ್ಮ ಕನ್ನಡದ ಇನ್ನೊಂದೇ ಅವತಾರ ಅಂದರೆ ನಿಮಗೆಲ್ಲ ಅಚ್ಚರಿಯಾಗಬಹುದು! ಹೌದು, ಈ ಕಂಗ್ಲಿಷ್‌ನ ಹುಟ್ಟಿಗೆ ಮತ್ತು ಪ್ರಸಾರಕ್ಕೆ ಕನ್ನಡದ ಮಕ್ಕಳೆಲ್ಲರೂ ಕಾಣಿಕೆ ಕೊಟ್ಟವರೇ! ಇದಕ್ಕೆ ನನ್ನೀ ಲೇಖನವೂ ಹೊರತಲ್ಲ! ಹೆಚ್ಚೇಕೆ, ನಾನೀವರೆಗೂ ಹೇಳಿದ ಆ ಆಯಾಗಳೆಲ್ಲರ ಮೊಬೈಲ್‌ಗಳಲ್ಲಿ ಟಪಗುಟ್ಟೋದು ಕನ್ನಡ ಶಬ್ದಗಳ ಇಂಗ್ಲಿಷ್ ಲಿಪಿ! ಇಲ್ಲೊಂದು ಕುತೂಹಲದ ಸಂಗತಿಯೆಂದರೆ ಸೂರ್ಯ ಮುಳುಗದ ಸಾಮ್ರಾಜ್ಯವೆಂದು ಹೆಸರು ಪಡೆದಿದ್ದ ಆಂಗ್ಲರ ಭಾಷೆಗೆ ಸ್ವಂತ ಲಿಪಿ ಇಲ್ಲದೆ ಅವರು ರೋಮನ್ನರ ಲಿಪಿಯನ್ನೇ ತಮ್ಮದಾಗಿ ಮಾಡಿಕೊಂಡಿರುವುದಂತೆ! ಆದರೂ ಈ ಲಿಪಿ ಇಂಗ್ಲಿಷ್ ಹೆಸರಲ್ಲೇ ನಮ್ಮ ಭಾಷೆಗಳ ನಡುವೆ ಮಣೆ ಹಾಕಿ ಕೂತುಬಿಟ್ಟಿದೆ! ಒಂದು ವೇಳೆ ಆಂಗ್ಲರು ಈ ದೇಶಕ್ಕೆ ಬರದೇ ಇದ್ದಿದ್ದರೆ ನಮ್ಮೆಲ್ಲಾ ಭಾಷೆಗಳ ಶುದ್ಧತೆ ಹೇಗಿರುತ್ತಿತ್ತು ಅನ್ನುವ ಕುತೂಹಲ ನನಗಂತೂ ಇದೆ.

ಒಟ್ಟಿನಲ್ಲಿ ನಮ್ಮ ದೇಶದ ಬೇರೆ ಸೋದರ ಭಾಷೆಗಳಿಗೆ ಹೋಲಿಸಿದರೆ ಇಷ್ಟೊಂದು ವೈವಿಧ್ಯಮಯ ರೂಪ ಇರುವುದು ಕನ್ನಡಕ್ಕೆ ಮಾತ್ರ ಅನ್ನುವುದು ನನ್ನ ಬಲವಾದ ನಂಬಿಕೆ!

ಕೊನೆಯದಾಗಿ, ನಮ್ಮತ್ತೆ ಕಾಲನ ಕರೆಗೆ ಓಗೊಟ್ಟು ಇದೀಗ ಮೂರು ವರ್ಷಗಳೇ ಕಳೆದು ಹೋಗಿವೆ... ಆದರೂ ಆ ಆಯಾಗಳೆಲ್ಲರ ಹೆಸರು, ಆಡುಮಾತಿನ ವೈವಿಧ್ಯ, ತಮ್ಮ ಬಾಳಬಟ್ಟೆಯ ಕುರಿತು ಒಡಲಲ್ಲಿ ಅದೆಷ್ಟೇ ನೋವು ತುಂಬಿದ್ದರೂ ಅವರಲ್ಲಿದ್ದ ಜೀವನ್ಮುಖೀ ಉತ್ಸಾಹ ಇವೆಲ್ಲ ಆಗಾಗ ಕಣ್ಮುಂದೆ ಹಾಜರಿ ಹಾಕುತ್ತಲೇ ಇರುತ್ತವೆ.

●